Fax : 08192 - 208008
Telephone : 08192 - 208309
website : davangereuniversity.ac.in
e-mail : cdcdu2013@gmail.com

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ – 577 002.

## ಕಾಲೇಜು ಅಭಿವೃದ್ಧಿ ಪರಿಷತ್

ಸಂ:ದಾವಿವಿ/ಸಿಡಿಸಿ/ಸಾಮಾನ್ಯ/2020–21/ ದಿನಾಂಕ:06.07.2021

## ಸುತ್ತೋಲೆ

ವಿಷಯ: ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜುಗಳ ಖಾಯಂ ಪ್ರಾಂಶುಪಾಲರ/ಖಾಯಂ ಬೋಧಕ ಸಿಬ್ಬಂದಿಗಳ (ವಿಷಯವಾರು) ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಣೆ ಕುರಿತು.

ಉಲ್ಲೇಖ:
1. ವಿ.ವಿ. ಸುತ್ತೋಲೆ ಸಂ:ದಾವಿವಿ/ಸಿಡಿಸಿ/402/2020–21/6064, ದಿನಾಂಕ:26.03.2021.
2. ವಾಟ್ಸಪ್ ದಿನಾಂಕ:03.07.2021.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:05.07.2021

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸಂಯೋಜಿತ ಸರ್ಕಾರಿ/ ಅನುದಾನಿತ / ಅನುದಾನರಹಿತ ಕಾಲೇಜುಗಳ ಪ್ರಾಂಶುಪಾಲರುಗಳನ್ನು / ಬೋಧಕ ಸಿಬ್ಬಂದಿಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳಿಗೆ / ವಿವಿಧ ಸಮಿತಿ/ಮಂಡಳಿಗಳಿಗೆ ಸೇವಾ ಜೇಷ್ಠತೆಗಣುಸಾರವಾಗಿ ಸರದಿಯ ಮೇಲೆ ನಾಮನಿರ್ದೇಶನ ಮಾಡಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–200 ಮತ್ತು ವಿವಿಧ ನಿಯಮಗಳನುಸಾರ ಅವಕಾಶವಿರುತ್ತದೆ. ಈ ಸಂಬಂಧವಾಗಿ ಉಲ್ಲೇಖಿತ (1) ಮತ್ತು (2)ರ ಸುತ್ತೋಲೆಗೆ ಪ್ರಾಂಶುಪಾಲರುಗಳು ನೀಡಿರುವ ಮಾಹಿತಿಯನ್ನು ಆಧರಿಸಿ ಪ್ರಾಂಶುಪಾಲರು / ಬೋಧಕ ಸಿಬ್ಬಂದಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲ: **www.davangereuniversity.ac.in** ನಲ್ಲಿ ಪ್ರಕಟಿಸಲಾಗಿದೆ.

ಆದುದರಿಂದ ಪ್ರಾಂಶುಪಾಲರು/ಬೋಧಕ ಸಿಬ್ಬಂದಿಗಳು ಜೇಷ್ಠತಾ ಪಟ್ಟಿಯಲ್ಲಿ ತಮ್ಮ ಜೇಷ್ಠತೆಯ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಅದನ್ನು ದಿನಾಂಕ:15.07.2021 ರೊಳಗಾಗಿ ಲಿಖಿತವಾಗಿ ಈ ಕೆಳಕಂಡ ದಾಖಲೆಗಳೊಂದಿಗೆ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಂಗೋತ್ರಿ, ದಾವಣಗೆರೆ– 577 007 ಈ ವಿಳಾಸಕ್ಕೆ ಖುದ್ದಾಗಿ / ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ.

1. ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರು / ಬೋಧಕ ಸಿಬ್ಬಂದಿಗಳೆಲ್ಲರು ಖಾಯಂ ಆಗಿ ನೇಮಕಾತಿ ಹೊಂದಿದ ಆದೇಶ ಮತ್ತು ಪ್ರಾಂಶುಪಾಲರಾಗಿ ನೇಮಕಾತಿ ಹೊಂದಿದ ಸರ್ಕಾರದ ಆದೇಶ ಪ್ರತಿಗಳನ್ನು ದೃಢೀಕರಣದೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

2. ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳ ಪ್ರಾಂಶುಪಾಲರು / ಬೋಧಕ ಸಿಬ್ಬಂದಿಗಳೆಲ್ಲರು ಖಾಯಂ ಆಗಿ ನೇಮಕಾತಿ ಹೊಂದಿದ ಆದೇಶ ಮತ್ತು ಪ್ರಾಂಶುಪಾಲರಾಗಿ ನೇಮಕಾತಿ ಹೊಂದಿದ ಆದೇಶ ಪ್ರತಿಗಳನ್ನು ಆಯಾ ಕಾಲೇಜುಗಳ ಆಡಳಿತ ಮಂಡಳಿಗಳ ದೃಢೀಕರಣದೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಲಿಖಿತ ಆಧಾರವಿಲ್ಲದ ಹಾಗೂ ನಿಗದಿತ ಅವಧಿ ನಂತರ ಬರುವ ಆಕ್ಷೇಪಣೆಗಳಿಗೆ ಮಾನ್ಯತೆ ಇರುವುದಿಲ್ಲ.

ಆದೇಶಾನುಸಾರ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಗೆ:

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸಂಯೋಜಿತ ಸರ್ಕಾರಿ/ ಅನುದಾನಿತ / ಅನುದಾನರಹಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ಈ ಮಾಹಿತಿಯನ್ನು ತಮ್ಮ ಕಾಲೇಜಿನ ಎಲ್ಲ ಭೋಧಕ ಸಿಬ್ಬಂದಿಗಳ ಗಮನಕ್ಕೆ ತರುವುದು.